# ಸಕಾರಾತ್ಮಕ ಕ್ರಿಯಾ ನೀತಿ

ಸಾಮಾಜಿಕ ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಉತ್ತೇಜಿಸುವ ಧ್ಯೇಯದಲ್ಲಿ ಟಾಟಾ ಪವರ್ ದೃಢ ನಂಬಿಕೆ ಇರಿಸಿದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳನ್ನು, ಅದರಲ್ಲೂ ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಅಂಗವಿಕಲ ವ್ಯಕ್ತಿಗಳು ಮತ್ತು ಅವಕಾಶವಂಚಿತ ಸಮುದಾಯಗಳ (ಎಎ ಗ್ರೂಪ್) ಮಹಿಳೆಯರನ್ನು ಸಬಲೀಕರಣಗೊಳಿಸುತ್ತಿದೆ. ಕೆಲಸದ ಸ್ಥಳದಲ್ಲಿನ ವೈವಿಧ್ಯತೆಯು ತನ್ನ ವಹಿವಾಟು, ಪಾಲುದಾರಿಕೆ ಮತ್ತು ಭವಿಷ್ಯದ ಸಿದ್ಧತೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂಬುದನ್ನು ಕಂಪನಿಯು ಸರಿಯಾಗಿ ಗ್ರಹಿಸಿದೆ. ಸಮಾಜದಲ್ಲಿನ ಎಎ ಗ್ರೂಪ್‌ನ ಶಿಕ್ಷಣ, ಉದ್ಯೋಗಾವಕಾಶ, ಹಣಕಾಸು ಮತ್ತು ಡಿಜಿಟಲ್ ಒಳಗೊಳ್ಳುವಿಕೆಯನ್ನು ಸುಧಾರಿಸಲು ಟಾಟಾ ಪವರ್ ತನ್ನ ತರಬೇತಿ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಸ್ವಯಂಪ್ರೇರಣೆಯಿಂದ ಒದಗಿಸಲಿದೆ. ಉದ್ಯಮಶೀಲತೆ ಮತ್ತು ಕೈಗಾರಿಗಳಿಗೆ ಸಂಬಂಧಿಸಿದ ಒಟ್ಟಾರೆ ಚಟುವಟಿಕೆಗಳಲ್ಲಿ ಎಎ ಗ್ರೂಪ್ ಸೇರ್ಪಡೆಗೊಳಿಸಲು ಮತ್ತು ಸಬಲೀಕರಣಗೊಳಿಸಲು ಟಾಟಾ ಪವರ್ ಅಗತ್ಯ ಪ್ರೋತ್ಸಾಹ ನೀಡುತ್ತಿದೆ.

**<u>ಸಕಾರಾತ್ಮಕ ಕ್ರಿಯಾ ನೀತಿಯ ಪ್ರಮುಖ ತತ್ವಗಳು</u>**

- ಸಮುದಾಯದ ಎಲ್ಲಾ ವರ್ಗಗಳ ಯೋಗಕ್ಷೇಮದ ಜೊತೆಗೆ ತನ್ನ ಸ್ಪರ್ಧಾತ್ಮಕತೆಯು ಪರಸ್ಪರ ಸಂಬಂಧ ಹೊಂದಿರುವುದನ್ನು ಟಾಟಾ ಪವರ್ ದೃಢಪಡಿಸುತ್ತದೆ.
- ವೈವಿಧ್ಯತೆ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯು ತನ್ನ ಬೆಳವಣಿಗೆ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲಿದೆ ಎನ್ನುವ ತತ್ವದಲ್ಲಿ ಟಾಟಾ ಪವರ್ ನಂಬಿಕೆ ಇರಿಸಿದೆ.
- ಕೆಲಸದ ಸ್ಥಳದಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳನ್ನು ಪ್ರತಿನಿಧಿಸುವ ವೈವಿಧ್ಯತೆಯು ವಹಿವಾಟಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂಬುದನ್ನು ಟಾಟಾ ಪವರ್ ದೃಢಪಡಿಸುತ್ತದೆ.
- ಅಗತ್ಯವಿರುವ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಎಎ ಸಮುದಾಯಗಳ ವೃತ್ತಿ ಕೌಶಲ ಮಟ್ಟವನ್ನು ಉನ್ನತೀಕರಿಸಲು ಟಾಟಾ ಪವರ್ ಸರ್ವ ಪ್ರಯತ್ನಗಳನ್ನು ಮಾಡುತ್ತದೆ.
- ಎಎ ಸಮುದಾಯ-ಗಳಿಗೆ ಅಗತ್ಯ ನೆರವು ಒದಗಿಸಲು ಸಂಬಂಧಿತ ಸಂಸ್ಥೆಗಳ ಜೊತೆಗೆ ಟಾಟಾ ಪವರ್ ಪಾಲುದಾರಿಕೆ ಮಾಡಿಕೊಳ್ಳುತ್ತದೆ.
- ಸಮಾಜದಲ್ಲಿನ ಅವಕಾಶವಂಚಿತ ವರ್ಗಗಳಿಗೆ ಸೇರಿದ ಜನರ ಜೀವನೋಪಾಯ ಮತ್ತು ಉದ್ಯೋಗಕ್ಕಾಗಿ ಸಮಾನ ಅವಕಾಶಗಳನ್ನು ಒದಗಿಸುವುದನ್ನು ಟಾಟಾ ಪವರ್ ಉತ್ತೇಜಿಸುತ್ತದೆ.
- ಟಾಟಾ ಪವರ್‌ನ ವಹಿವಾಟಿನ ಪಾಲುದಾರರ ಆಯ್ಕೆಯು ನಿಯಮಿತ ವಹಿವಾಟಿನ ಮಾನದಂಡಗಳನ್ನು ಆಧರಿಸಿರುತ್ತದೆ. ಎಲ್ಲಾ ಮಾನದಂಡಗಳು ಸಮಾನವಾಗಿದ್ದರೆ, ಕಂಪನಿಯು ಎಎ ಗ್ರೂಪ್‌ಗಳಿಗೆ ಸೇರಿದ ವ್ಯಾಪಾರ ಪಾಲುದಾರರಿಗೆ ಸಕಾರಾತ್ಮಕವಾಗಿ ಆದ್ಯತೆ ನೀಡುತ್ತದೆ.

**ದಿನಾಂಕ**: 14 ಜನವರಿ 2025

**(ಪ್ರವೀರ್ ಸಿನ್ಹಾ)**
ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ